# ‘ಸುಲ್ತಾನ್’ ಖಾನ್

ವಿವಾದಗಳು ಏನಾದರೂ ಇರಲಿ, ಬಾಲಿವುಡ್‌ನಲ್ಲಿ ಸಲ್ಮಾನ್ ಖಾನ್ ಬಾಕ್ಸಾಫೀಸ್ ‘ಸುಲ್ತಾನ್’ ಎನ್ನುವುದರಲ್ಲಿ ಎರಡು ಮಾತಿಲ್ಲ. ‘ಸುಲ್ತಾನ್’ ಚಿತ್ರ ಬಿಡುಗಡೆಯಾದ ಮೊದಲ ದಿನವೇ 36.54 ಕೋಟಿ ರೂಪಾಯಿ ಹಣ ಗಳಿಸಿದೆ. 2016ರಲ್ಲಿ ಹಿಂದಿ ಸಿನಿಮಾವೊಂದು ಮೊದಲ ದಿನದಲ್ಲೇ ಗಳಿಸಿದ ಅತ್ಯಧಿಕ ಹಣವಿದು. ಮೂರೇ ದಿನದಲ್ಲಿ ಈ ಸಿನಿಮಾ 110 ಕೋಟಿ ಕಲೆಕ್ಷನ್‌ನ ಗಡಿ ದಾಟಿದೆ. ಬಾಲಿವುಡ್‌ನಲ್ಲಿ ಮೊದಲ ಮೂರು ದಿನಗಳಲ್ಲಿ 100 ಕೋಟಿ ಗಳಿಕೆ ದಾಟಿದ ನಾಲ್ಕನೇ ಚಿತ್ರವಿದು. ಸಲ್ಮಾನ್ ಖಾನ್ ನಡವಳಿಕೆ ಬಗ್ಗೆ, ಮಾತುಗಳ ಬಗ್ಗೆ ಜನರು ಎಷ್ಟೇ ಎಗರಾಡಿದರೂ, ಸಿಟ್ಟಿಗೆದ್ದರೂ ಆತನ ಸಿನಿಮಾ ನೋಡಲು ನೂಕುನುಗ್ಗಲು ನಡೆಸುತ್ತಾರೆ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ಜನರ ಈ ಮನಸ್ಥಿತಿಯನ್ನು ಏನೆಂದು ಕರೆಯಬಹುದು.. ಎನ್ನುವುದು ಸಮಾಜ ವಿಜ್ಞಾನಿಗಳ ಚಿಂತೆಯ ವಿಷಯ. ಜನರ ನೆನಪಿನ ಶಕ್ತಿ ಕಡಿಮೆ ಎನ್ನಬಹುದಾದರೆ, ಇನ್ನೂ ‘ರೇಪ್ ಹೇಳಿಕೆ’ ಪ್ರಕಟವಾಗಿ ಒಂದು ವಾರವೂ ಆಗಿಲ್ಲ. ಹಾಗಿದ್ದರೆ ಜನರು ‘ಆತ ಏನಾದರೂ ಬಡಬಡಿಸಲಿ, ಸಿನಿಮಾ ಬೇರೆ– ಆತನ ನಡವಳಿಕೆ ಬೇರೆ’ ಎಂದು ತಿಳಿದುಕೊಂಡಿದ್ದಾರೆಯೆ? ಹಾಗೂ ಇರಬಹುದು.

‘ಸುಲ್ತಾನ್’ ಚಿತ್ರದ ಕುಸ್ತಿ ಚಿತ್ರೀಕರಣದ ವೇಳೆ ಬಹಳ ಸಲ ಸುಸ್ತಾಗಿ ‘ಅತ್ಯಾಚಾರಕ್ಕೆ ಒಳಗಾದ ಮಹಿಳೆಯಂತೆ ಭಾಸವಾಗುತ್ತಿತ್ತು’ ಎಂದು ಸಲ್ಮಾನ್ ಖಾನ್ ನಗುತ್ತಾ ನೀಡಿದ ಹೇಳಿಕೆ ಖಂಡಿತವಾಗಿಯೂ ಒಳ್ಳೆಯ ಅಭಿರುಚಿಯದ್ದಲ್ಲ. ನಾಗರಿಕ ಸಮಾಜದಲ್ಲಿ ಮಹಿಳೆಯನ್ನು ಗೌರವಿಸುವಂತಹದ್ದಂತೂ ಅಲ್ಲವೇ ಅಲ್ಲ. ಇದು ಸಲ್ಮಾನ್ ಅಂತಲ್ಲ; ನಮ್ಮಲ್ಲಿ ಬಹುತೇಕ ಗಂಡಸರು ಹೆಣ್ಣುಮಕ್ಕಳ ನೋವಿನ ಬಗ್ಗೆ ಹೀಗೆಯೇ ಹಗುರವಾಗಿ ಮಾತನಾಡುತ್ತಾರೆ. ಆದರೆ ಯಾರೋ ದಾರಿಹೋಕ ಹೀಗೆ ಮಾತನಾಡಿದರೆ ಅದು ಸುದ್ದಿಯಾಗುವುದಿಲ್ಲ. ಸಲ್ಮಾನ್ ಖಾನ್ ನಂತಹ ಬಾಲಿವುಡ್‌ನ ಅತ್ಯಂತ ಪ್ರಮುಖ ನಟ, ಸಮಾಜಕ್ಕೆ ತನ್ನ ಸಿನಿಮಾದಲ್ಲಿ ಮೌಲ್ಯಗಳ ಉಪದೇಶ ಮಾಡುವ ನಟ– ಹೀಗೆ ಲಘುವಾಗಿ ಮಾತನಾಡಿದರೆ ಸರಿಯೆ.. ಎನ್ನುವುದು ಪ್ರಶ್ನೆ. ಈ ಪ್ರಕರಣದಲ್ಲಿ ಸಲ್ಮಾನ್‌ಗೆ ಇನ್ನೊಂದು ದಾರಿಯಿತ್ತು. ‘ಏನೋ ಅಪ್ರಜ್ಞಾಪೂರ್ವಕವಾಗಿ ಮಾತನಾಡಿದ್ದೇನೆ’ ಎಂದು ಅನ್ನಿಸಿದ್ದರೆ ಅಥವಾ ‘ನಿಜಕ್ಕೂ ತಪ್ಪಾಗಿದೆ, ಹೀಗೆ ಮಾತನಾಡಬಾರದಿತ್ತು’ ಎಂದು ಅನ್ನಿಸಿದ್ದರೆ ಅದನ್ನು ಆತ ಬಹಿರಂಗವಾಗಿ ಹೇಳಬಹುದಿತ್ತು. ಕ್ಷಮೆ ಕೇಳಬಹುದಿತ್ತು. ಆದರೆ ಸಲ್ಮಾನ್ ತನ್ನಂತಹ ‘ಸೂಪರ್‌ಹೀರೊ ತಪ್ಪು ಮಾಡುವುದೇ ಇಲ್ಲ’ ಎಂದು ಭಾವಿಸಿದ್ದಾನೆಯೆ? ವಿಷಯ ದೊಡ್ಡದಾಗಿ ಮಾಧ್ಯಮಗಳಲ್ಲಿ ಇಡೀ ದಿನ ಚರ್ಚೆ ಶುರುವಾದಾಗ, ಎಲ್ಲರೂ ಸಲ್ಮಾನ್‌ನನ್ನು ಖಂಡಿಸಲು ತೊಡಗಿದಾಗ ಆತನ ತಂದೆ ಸಲೀಂ ಖಾನ್, ಟ್ವಿಟ್ಟರ್ ನಲ್ಲಿ ಮಗನ ಪರವಾಗಿ ಕ್ಷಮೆ ಕೋರುತ್ತಾರೆ. ಇದು ಇನ್ನೂ ಹಾಸ್ಯಾಸ್ಪದ. ಅದರ ಬದಲು ಮಗನಿಗೇ ಕ್ಷಮೆ ಕೋರಲು ಸೂಚಿಸಬಹುದಿತ್ತಲ್ಲ?

ಸಲ್ಮಾನ್ ಬಾಯಿತಪ್ಪಿಯೇ ಈ ಮಾತನ್ನು ಹೇಳಿದ್ದಿರಬಹುದು. ಅಥವಾ ಆತನ ಉದ್ದೇಶ ಅದಲ್ಲದಿರಬಹುದು. ನವಾಜುದ್ದೀನ್ ಸಿದ್ದಿಖಿ ಸಹಿತ ಕೆಲವು ನಟರು ಹೀಗೆ ಹೇಳಿ ಸಲ್ಮಾನ್‌ನನ್ನು ಸಮರ್ಥಿಸಿಕೊಂಡಿದ್ದಾರೆ. ಶಾರೂಕ್ ಖಾನ್‌ಗೆ ಪ್ರತಿಕ್ರಿಯೆ ಕೇಳಿದರೆ, ‘ಅದರ ಬಗ್ಗೆ ಮಾತನಾಡುವ ಅರ್ಹತೆ ನನಗಿಲ್ಲ’ ಎಂದ! ಅಮೀರ್‌ಖಾನ್ ಮಾತ್ರ ‘ಸಲ್ಮಾನ್ ಹೇಳಿಕೆ ಅಸೂಕ್ಷ್ಮ ಮತ್ತು ದುರದೃಷ್ಟಕರ’ ಎಂದ. ಕಂಗನಾ ರನೌತ್ ಸಿಟ್ಟಿಗೆದ್ದು ‘ಇದು ಶಾಕಿಂಗ್, ತೀರಾ ಅಸೂಕ್ಷ್ಮ ಹೇಳಿಕೆ’ ಎಂದು ಕಟುಕಿದ್ದೂ ಆಯಿತು. ಆದರೆ ಬಹುಪಾಲು ಬಾಲಿವುಡ್ ನಟರು ತುಟಿ ಬಿಚ್ಚಿಲ್ಲ. ಉದ್ಯಮವನ್ನು ಆಳುವವರ ಪೈಕಿ ಪ್ರಮುಖನಾಗಿರುವ ಸಲ್ಮಾನ್ ವಿರೋಧ ಕಟ್ಟಿಕೊಳ್ಳಲು ಯಾರಿಗೂ ಧೈರ್ಯವಿಲ್ಲ. ಸಲ್ಮಾನ್ ಬದಲಿಗೆ ಬೇರೆ ಯಾವುದೇ ಸಣ್ಣ–ಪುಟ್ಟ ನಟರು ಈ ಹೇಳಿಕೆ ನೀಡಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು.. ಊಹಿಸಿ.



51ರ ಹರೆಯದ (ಬರ್ತ್‌ಡೇ 27–12–1965) ಸಲ್ಮಾನ್ ಅದೃಷ್ಟವಂತನಂತೂ ಹೌದು. ಹಿಂದೆಯೂ ಇಂತಹ ಹಲವು ವಿವಾದಗಳಲ್ಲಿ ಸಿಕ್ಕು ಬಚಾವಾಗಿ ಬಂದಿದ್ದಾನೆ. ಸದ್ಯಕ್ಕೆ ಬಾಲಿವುಡ್‌ನಲ್ಲಿ ಅತ್ಯಂತ ಹೆಚ್ಚು ಬಾಕ್ಸಾಫೀಸ್ ಕಲೆಕ್ಷನ್ ನಡೆಸುವ ಮೂವರು ಖಾನ್‌ಗಳ ಪೈಕಿ ಸಲ್ಮಾನ್ ಮುಂಚೂಣಿಯಲ್ಲಿದ್ದಾನೆ. ಎರಡು ವರ್ಷಗಳ ಹಿಂದೆ ಶಾರೂಕ್ ಖಾನ್‌ನ ‘ಹ್ಯಾಪಿ ನ್ಯೂ ಇಯರ್’ ಸಿನಿಮಾ ಮೊದಲ ದಿನವೇ 44.97 ಕೋಟಿ ರೂಪಾಯಿ ದಾಖಲೆ ನಿರ್ಮಿಸಿರಬಹುದು. ಆದರೆ ಇತ್ತೀಚಿನ ಮೂರು ಚಿತ್ರಗಳ ಮೊದಲ ದಿನದ ಕಲೆಕ್ಷನ್ ತೆಗೆದುಕೊಂಡರೆ ಶಾರೂಕ್‌ಗಿಂತ ಸಲ್ಮಾನ್ ಮುಂದಿದ್ದಾನೆ. ಅಮೀರ್ ಖಾನ್ ಕೂಡಾ ಸಲ್ಮಾನ್‌ಗಿಂತ ಹಿಂದಿದ್ದಾನೆ. ಸಿನಿಮಾದ ಕಲೆಕ್ಷನ್ ಮಾತ್ರವಲ್ಲ, ಸಾಮಾಜಿಕ ಜಾಲತಾಣಗಳಲ್ಲೂ ಸಲ್ಮಾನ್ ಉಳಿದಿಬ್ಬರು ಖಾನ್‌ಗಳನ್ನು ಹಿಂದಿಕ್ಕಿದ್ದಾನೆ. ಫೇಸ್‌ಬುಕ್‌ನಲ್ಲಿ 31.60 ಕೋಟಿ ಲೈಕ್ಸ್ ಪಡೆದಿರುವ ನಟ ಸಲ್ಮಾನ್. ಟ್ವಿಟ್ಟರ್‌ನಲ್ಲಿ 1.85 ಕೋಟಿ ಫಾಲೋವರ್‌ಗಳಿದ್ದಾರೆ! ಸದ್ಯಕ್ಕಂತೂ ಸಲ್ಮಾನ್ ಓಡುವ ಕುದುರೆ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65